ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

(ಅ) ಬೆಂಗಳೂರು ದೂರದರ್ಶನದ ಪ್ರಸಾರ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಮಗೆ ದೂರದರ್ಶನದ ಬಗ್ಗೆ ಬಹಳ ನೋವಾಗಿದೆ. ಅವರಿಗೆ ಏನು ಎಚ್ಚರಿಕೆ ಕೊಡಲಿಲ್ಲವೆಂದರೆ ಬಹಳ ಅಪಾಯ ಇದೆ. ಈ ಸದನದಲ್ಲಿ ಮಾನ್ಯ ವಿರೋಧ ಪಕ್ಷದ ಮುಖಂಡರು ಮಾತನಾಡಿದ್ದಾರೆ. ಒಂದು ಲೈನ್ ತಾವು ಅವರನ್ನು ಬಯ್ದಿದ್ದ ಮಾತ್ರ ಹಾಕುವುದು, ನಮ್ಮನ್ನು ಅವಹೇಳನ ಮಾಡಿದ್ದು ಹಾಕತಕ್ಕಂಥಾದ್ದು, ಅವರು ರಾಜಕೀಯ ಮಾಡುತ್ತಿದ್ದಾರೆ. ಇದರಿಂದ ಹಕ್ಕುಚ್ಯುತಿಯಾಗುತ್ತದೆ. ಸದನದಲ್ಲಿ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಮುಖ್ಯಮಂತ್ರಿಗಳು, ನಾವು ಮಾತನಾಡಿದ್ದೇವೆ. ಯಾರಿಗಾದರೂ ತೇಜೋವಧೆ ಮಾಡುವುದಿದ್ದರೆ ಅದನ್ನು ಹಾಕುತ್ತಾರೆ, ಈ ಪರಿಸ್ಥಿತಿ ಸರಿಯಲ್ಲ, ಹಿಂದೆ ಇದು ನಡೆದಿರಲಿಲ್ಲ. ಮಾನ್ಯ ಅಧ್ಯಕ್ಷರೇ, ಇನ್ನು ಮುಂದೆ ಈ ರೀತಿಯಾಗುವುದಿಲ್ಲವೆಂದು 2-3 ಸಾರಿ ಅಧಿಕಾರಿಗಳು ಬಂದು ಕ್ಷಮೆ ಕೇಳಿದ್ದಾರೆ. ಶಾಸನಸಭೆಯಲ್ಲಿ ಹೇಗೆ ಬೇಕಾದರೂ ಮಾಡಬಹುದು, ಹೊರಗಡೆ ಏನು ಬೇಕಾದರೂ ಮಾಡಬಹುದು ಎಂದಾದರೆ ಇದು ಸರಿಯಲ್ಲ. ಖಾಸಗಿ ಚಾನಲ್‌ಗಳು ಏನು ಬೇಕಾದರೂ ಮಾಡಿಕೊಳ್ಳಲಿ. ಇದು ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು ಇದು ಸರಿಯಾದ ವ್ಯವಸ್ಥೆಯಲ್ಲ. ಒಂದು ಲೈನ್ ಅವರನ್ನು ಬಯ್ದಿದ್ದು ಏಕೆ ಹಾಕಬಾರದು ಬೇರೆಯವರು ಮಾತನಾಡಿದಾಗ ಮಾತ್ರ ಗೊತ್ತಾಗುತ್ತದೆ. ಅವರನ್ನು, ಅವರ ವ್ಯವಸ್ಥೆಯನ್ನು ಬೈಯ್ದಾಗ ಅದರ ಬಗ್ಗೆ ಬರುವುದಿಲ್ಲವೆಂದರೆ ಏನು?

ಅಧ್ಯಕ್ಷರು : ತಾವು ಹೇಳಿದ ಕಡೆಗೆ ನನ್ನ ತೀವ್ರವಾದ ಗಮನವನ್ನು ಕೂಡಲೇ ಹರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಅವಕಾಶ ಕೊಟ್ಟರೆ ಇದರ ಬಗ್ಗೆ ನಾನು ಹಕ್ಕುಚ್ಯುತಿಯನ್ನು ತರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಹಕ್ಕುಚ್ಯುತಿ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಅದನ್ನು ತಂದುಬಿಡಿ. ಇಲ್ಲದಿದ್ದರೆ ಸುಮ್ಮನೆ ಗಾಳಿಗೆ ಗುದ್ದಿ ಮೈ ನೋವು ಮಾಡಿಕೊಂಡಂತೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಕ್ಷಣ ನಾನು ತರುವುದಕ್ಕಿಂತ ಅವರು ಮಾತನಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರ ಕೈಯನ್ನು ಬಲಪಡಿಸಬೇಕಾದರೆ ಅಂತಹ ಒಂದು ಪ್ರಸ್ತಾವನೆ ಚರ್ಚೆಯಾಗಬೇಕು.

ಅಧ್ಯಕ್ಷರು : ನಾನು ದಿನವೂ ವ್ಯಾಯಾಮ ಮಾಡುತ್ತೇನೆ. ನನ್ನ ಕೈ ಗಟ್ಟಿಯಾಗಿದೆ. ಪಾಪ ಅವರು ಏನೋ ಮಾಡುವುದಕ್ಕೆ ಹೋದರೆ ಇವರು ಅನಾಹುತ ಮಾಡುವುದಕ್ಕೆ ಹೋಗುತ್ತಾರೆ. ನೀವು ಕುಳಿತುಕೊಳ್ಳಿ ನಾನು ಸರಿ ಮಾಡುತ್ತೇನೆ. ನೀವು ನನ್ನ ಮಾತನ್ನು ನಂಬಿದ್ದೀರಿ. ನಮ್ಮಿಬ್ಬರ ಮಧ್ಯೆ ವ್ಯವಹಾರ ಇರಲಿ ನಾನು ಸರಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲಿ ನಡೆದಂತಹ ವ್ಯವಹಾರವನ್ನು ಅಂತಿಮವಾಗಿ ನಿಮ್ಮಿಬ್ಬರ ಮಧ್ಯೆ ಉಳಿಸಿಕೊಂಡರೆ, ನಾವು ಇರುವುದು ಏತಕ್ಕೆ ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಿಮ್ಮ ಮಾತನ್ನು ನಾನು ಖಂಡಿತ ಒಪ್ಪುತ್ತೇನೆ. ತಿಮ್ಮಪ್ಪನವರೆ ನಾನು ನಿಮಗೆ ಬೆಂಬಲ ಕೊಡುತ್ತೇನೆ. ಅಧ್ಯಕ್ಷರೆ, ನಿನ್ನೆ ತಾವು ಕೇಳಿರಬಹುದು, ನೀವು ಸದಾನಂದ ಗೌಡರನ್ನು ಅವಹೇಳನ ಮಾಡಿದ್ದು ಇದೆಯೇ ದೂರತು, ಈ ಸದನದಲ್ಲಿ ವಿರೋಧಪಕ್ಷದ ನಾಯಕರಾದ ಮಾನ್ಯ ಖರ್ಗೆಯವರು, ಸಂಜೀಗೌಡರು ರಾಮಕೃಷ್ಣ, ಶಿವಪ್ಪನವರು ಹಾಗೂ ಆ ಕಡೆ ಮಾನ್ಯ ಮುಖ್ಯಮಂತ್ರಿಗಳು, ಸಂಸದೀಯ ಸಚಿವರು ಕೂಡ ತಮ್ಮ ಬಗ್ಗೆ ಮಾತನಾಡಿದರು, ಅದರ ಬಗ್ಗೆ ಒಂದು ಲೈನ್ ಇಲ್ಲ. ಇಂಗ್ಲಿಷ್ ನ್ಯೂಸ್‌ನಲ್ಲಿ ಇಲ್ಲ, ಹಿಂದಿ ನ್ಯೂಸ್‌ನಲ್ಲಿ ಇಲ್ಲ. ಅಂದರೆ ಇವರು ಮದ್ರಾಸ್‌ದು ಹಾಕುತ್ತಾರೆ, ಆಂಧ್ರದು ಹಾಕುತ್ತಾರೆ, ಕೇರಳದು ಹಾಕುತ್ತಾರೆ. ಇವರು ನಮ್ಮ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ. ಹಿಂದೆ ಇದ್ದಂತಹವರು ಈ ತರಹ ಮಾಡುತ್ತಿರಲಿಲ್ಲ. ಇದು ಅವ್ಯವಸ್ಥೆಯಾಗಿದೆ. ದೂರದರ್ಶನ ನಮಗೆ ದೂರವಾಗಿದೆ.

ಅಧ್ಯಕ್ಷರು : ಬೇಡ, ತಾವು ನಿಗ್ರಹದಿಂದ ಇರಬೇಕು. ದಯಮಾಡಿ ನನ್ನ ಮೇಲೆ ವಿಶ್ವಾಸ ಇಡಿ. ನಾನು ಅವರನ್ನು ಕರೆಯಿಸಿ ಏನು ಹೇಳಬೇಕು ಅದನ್ನು ಹೇಳುತ್ತೇನೆ. ಪರಿಸ್ಥಿತಿ ಸುಧಾರಿಸದೆ ಹೋದರೆ, ಇಡೀ ಸದನ ಎಲ್ಲಾ ಕಲೆತು ಏನು ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಳ್ಳೋಣ. ನಾನು ನಿಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ. ಇದಕ್ಕೆ ಸರ್ಕಾರ ಸಹಕರಿಸಬೇಕಾಗುತ್ತದೆ. ಕೊನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುವ ದಿನ ಮಾನ್ಯ ಸದಸ್ಯರುಗಳು ಕೆಲವು ಸಣ್ಣ ಸಣ್ಣ ವಿಷಯ ಗಳನ್ನು ಪ್ರಸ್ತಾಪ ಮಾಡಿದರು. ಅದಕ್ಕೆ ಮಾನ್ಯ ಸಭಾನಾಯಕರು ಅರ್ಧಗಂಟೆ ಸ್ಪಷ್ಟೀಕರಣ ಕೊಟ್ಟರೆ ಸಾಕು.

Sri N. RAJANNA : Sir, May I request you kindly refer to rule 24 of the Rules of Procedure. It says `The Speaker may, if he thinks fit prescribe a time limit for speeches after taking the sense of the Assembly'.... ಸೆನ್ಸ್ ತಿಳಿದುಕೊಂಡು ನನಗೆ ಸೋಮವಾರ ಮಾತನಾಡಿ ಎಂದು ಹೇಳಿದಿರಿ. I have given the letter on 14th ಈ ಒಂದು ಘಟನೆ ನಿನ್ನೆ ಎಲ್ಲಾ ನಡೆದುಹೋಗಿದೆ. ನನಗೆ ಟೈಂ ಕೊಡುತ್ತಿದ್ದೀರಿ. With all this we want to express many things. We want to speak about the achievement of the Government, we want to explain our problems, ಲೋಕಸಭೆಯಲ್ಲಿ ಇರುವಂತಹ ಪ್ರತಿಯೊಂದು ಪಕ್ಷವು ಅವರವರ ಸದಸ್ಯರ ಸಂಖ್ಯೆ ಆಧಾರದ ಮೇಲೆ ಇಂತಿಷ್ಟು ಸಮಯ ಎಂದು ನಿಗದಿಪಡಿಸುತ್ತಾರೆ. ಆ ರೀತಿ ಇಲ್ಲಿಯೂ ಪಾಲಿಸಿದರೆ, ಆಡಳಿತ ಪಕ್ಷದ ಸದಸ್ಯರಾದ ನಮಗೂ ಸಹ ಹಲವಾರು ಸಮಸ್ಯೆಗಳನ್ನು ಸದನಕ್ಕೆ ತಿಳಿಸಲು ಸಾಧ್ಯವಾಗುತ್ತದೆ. ಹಾಗೂ ವಿರೋಧಪಕ್ಷದವರು ಮಾಡಿರುವ ಹಲವಾರು ಆರೋಪಗಳಿಗೆ ಸಹ ಉತ್ತರವನ್ನು ನಮ್ಮ ಭಾಷಣದ ರೂಪದಲ್ಲಿ ನೀಡಲು ಸಾಧ್ಯಾವಾಗುತ್ತದೆ. You have given more time. We appreciate but we all know what happened yesterday. Sir, the Daily Allowance of Rs. 250/- paid to us, I am not for that. I can earn this money in my cattle shed @ Rs. 100/- and led a *contented* life. Please allow me to speak.

ಅಧ್ಯಕ್ಷರು : ರಾಜಣ್ಣನವರೇ ಕೆಲವು ಸಲ ಇವೆಲ್ಲಾ ಆಗುತ್ತವೆ. ನಾವು ಅಂದು ಕೊಂಡಂಥ ವಿಷಯ ಬಿಟ್ಟು ಬೇರೆ ವಿಚಾರ ಪ್ರಸ್ತಾಪ ಮಾಡುತ್ತಾರೆ, ಸಮಯ ಆ ಕಡೆ ಹೋಗುತ್ತಾ ಇದೆಲ್ಲ ಆಗುತ್ತದೆ. ಮತ್ತೆ ಸಚೇತಕರು ನಮಗೆ ಒಂದು ಪಟ್ಟಿಯನ್ನು ಕಳುಹಿಸುತ್ತಾರೆ. ಕೆಲವು ಸಲ ನಾವ ಪಟ್ಟಿಯನ್ನು ಕೂಡ ಕಟ್ ಮಾಡುತ್ತಾ ಹೋಗುತ್ತೇವೆ. ಟೈಮ್ ಕೂಡ ಕಟ್ ಮಾಡುತ್ತೇವೆ. ನೀವ ಮಾತನಾಡಿದ ಒಟ್ಟು ಅರ್ಥ ಏನಿದೆ ಎಂದರೆ ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವುದು. ಇವೊತ್ತ ಕಡೇ ದಿವಸ ಅದಕಾರಣ ಇದುವರೆಗೆ ಆದದ್ದನ್ನು ದಯಮಾಡಿ ಬೇಸರ ಮಾಡಿಕೊಳ್ಳದೆ ಸಹಕರಿಸಿ ಮುಂದೆ ಬಡ್ಜೆಟ್ ಅಧಿವೇಶನ ಬರುತ್ತದೆ. ಆಗ ಸಮಯ ಕೊಡುತ್ತೇನೆ. ಮುಂದೆ ಬಡ್ಜೆಟ್ ಮೇ ಜನರಲ್ ಡಿಸ್ಕಶನ್ ಪ್ರಾರಂಭ ಮಾಡಿದಾಗ, ಡಿಮ್ಯಾಂಡ್ಸ್‌ಗಳ ಮೇಲೆ ಡಿಸ್ಕಶನ್ ಪ್ರಾರಂಭ ಮಾಡಿದಾಗ ಖಂಡಿತ ನೀವು ಹೇಳಿದ ಸಲಹೆಯನ್ನು ನಾನು ಪಾಲನೆ ಮಾಡುತ್ತೇನೆ. Today is the last day Hon'ble Members want to speak certain small matters. I will give them 2 minutes each. I request their co-operation.

(ಆ) ಸಣಬು, ಸಣದ ಕೊಪ್ಪಲು ಹಾಗೂ ತಿರ್ಮಲಾಪುರ ಗ್ರಾಮದಲ್ಲಿ 250 ಎಕರೆ ಮುಳುಗಡೆಯಾಗಿರುವ ಬಗ್ಗೆ

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಎರಡು ವಿಷಯ ಇದೆ. ಒಂದೊಂದು ನಿಮಿಷದಲ್ಲಿ ಪ್ರಸ್ತಾಪ ಮಾಡುತ್ತೇನೆ. ಸಣಬಾ, ಸಣದಕೊಪ್ಪಲು ತಿರ್ಮಲಾಪುರದಲ್ಲಿ 250 ಎಕರೆ ಮುಳುಗಡೆಯಾಗಿದೆ. ಸುಮಾರು 1993-94, 1994-95, 1995-96ನೇ ಸಾಲಿನಲ್ಲಿ 250 ಏಕರೆ ಅವರಿಗೆ ಕಾಂಪೆನ್‌ಸೇಶನ್ ಕೊಟ್ಟಿಲ್ಲ. ಅವರು ಹೇಮಾವತಿ ಕಚೇರಿಗೆ ಮುತ್ತಿಗೆ ಹಾಕಿ ಹಣಕ್ಕಾಗಿ ಒತ್ತಾಯ ಮಾಡಿದ್ದಾರೆ. ನಾಲ್ಕು ವರ್ಷಗಳಿಂದ ಮುಳುಗಡೆಯಾಗಿದ್ದು, ರೈತರು ನಷ್ಟವನ್ನು ಅನುಭವಿಸು ತ್ತಿದ್ದಾರೆ ಹಾಗೂ ಅವರಿಗೆ ಬಹಳ ಅನಾನುಕೂಲವಾಗಿದೆ. ರೆವೆನ್ಯೂ ಇಲಾಖೆಯವರು ಹಾಗೂ ನೀರಾವರಿ ಇಲಾಖೆಯವರು ಸರಿಯಾಗಿ ಕೆಲಸ ಮಾಡಿಲ್ಲ. ಆದಕಾರಣ ಅದರ ಬಗ್ಗೆ ಸರ್ಕಾರ ತ್ವರಿತವಾಗಿ ಕಾರ್ಯಕ್ರಮವನ್ನು ರೂಪಿಸಿ ರೈತರಿಗೆ ಹಣ ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

(ಆ) ಶಿಂಷಾ ನದಿ ದಡದಲ್ಲಿ 15 ಎಕರೆ ಮರಳು ಇರುವ ಕುರಿತು

ಇನ್ನು ಎರಡನೇಯದಾಗಿ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರಿಗೆ ಸಂಬಂಧಪಟ್ಟಂತೆ ಶಿಂಷಾ ನದಿ ದಡದಲ್ಲಿ ಸುಮಾರು 15 ಎಕರೆ ಮರಳು ಇದೆ. ಅಲ್ಲಿ ಇಡೀ ಗ್ರಾಮದವರು ಒಂದು ಸಮಿತಿಯನ್ನು ಮಾಡುವುದರ ಮೂಲಕ, ಆ ಮರಳನ್ನು ಆ ಗ್ರಾಮದಲ್ಲಿ ಇರತಕ್ಕಂಥ ಶಾಲೆ, ದೇವಸ್ಥಾನಗಳು, ರಸ್ತೆಗಳಿಗೆ ಉಪಯೋಗಿಸಿಕೊಂಡು ಒಂದು ಗ್ರಾಮ ಸ್ವರಾಜ್ಯ ಸಮಿತಿ ಮಾಡುವುದರ ಮೂಲಕ ಅದರ ಉಪಯೋಗ ಪಡೆದುಕೊಂಡು ಅದರಿಂದ ಬಂದಂಥ ಆದಾಯವನ್ನು ಇಡೀ ಗ್ರಾಮದ ಅಭಿವೃದ್ಧಿಗೋಸ್ಕರ ಉಪಯೋಗಿಸತಕ್ಕಂಥ ವಿಚಾರದಲ್ಲಿ ಹೋರಾಟ ನಡೆಸಿದ್ದರು. ಆದರೆ ಒಂದೆರಡು ಕುಟುಂಬದವರು ಈಡೀ ಮರಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಂದ ಪಡೆದು ಸ್ವಂತಕ್ಕೆ ಉಪಯೋಗಿಸಿಕೊಂಡಿರುವುದರಿಂದ ಅಲ್ಲಿ ಒಂದು ಹೋರಾಟ ಪ್ರಾರಂಭವಾಗಿದೆ.